**ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ**

**ಸಿ.ಸಿ ಸಂಖ್ಯೆ.*ನಂ.1628/2024***

**ಫಿರ್ಯಾಧಿದಾರಃ** ಸರಕಾರದ ಪರವಾಗಿ ಕುಂಚಾವರಂ ಪೋಲಿಸ ಠಾಣೆ

// ವಿರುದ್ಧ //

**ಆರೋಪಿತರು :** ಪ್ರಭು ಮತ್ತು ಇತರರು

ಆ ರೋ ಪ ಣೆ

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಈ ಕೆಳಕಂಡ ಆರೋಪಿತರು.

| | |
|---|---|
| 1. | ಪ್ರಭು ತಂದೆ ಅಂಜಯ್ಯ ಮೊಗಟಂ |
| 2. | ಯಾದಯ್ಯಾ ತಂದೆ ಅಂಜಯ್ಯ ಮೊಗಟಂ. |
| 3. | ಕವಿತಾ ಗಂಡ ಪ್ರಭು. |
| 4. | ಶೋಭಾ ತಂದೆ ಯಾದಯ್ಯಾ |
| 5. | ಸಾತಮ್ಮ ಗಂಡ ಅಂಜಯ್ಯ |
| 6. | ಶ್ರೀದೇವಿ ಗಂಡ ಮೊಘಲಯ್ಯ |
| 7. | ಮೋಘಲಯ್ಯ ತಂದೆ ರಾವಯ್ಯ |
| 8. | ಸಾಯಿಕೃಷ್ಣಾ |
| 9 | ಪೂಜಾ ತಂದೆ ಮೋಘಲಯ್ಯ |
| 10. | ರಾಕೇಶ ತಂದೆ ಮೋಘಲಯ್ಯ |
| 11 | ಶಂಕ್ರಯ್ಯ ತಂದೆ ರಾಮಯ್ಯ |
| 12 | ಕೃಷ್ಣವೇಣಿ ಗಂಡ ರವಿ<br>ಎಲ್ಲರ ವಾಸಃ ಕುಂಚಾವರಂ ಗ್ರಾಮ, ತಾಃ ಚಿಂಚೋಳಿ |

**<u>ಆದ ನಿಮ್ಮ ವಿರುದ್ಧ ದೋಷಿಸುವ ಆರೋಪಣೆ ಎನೆಂದರೆ,</u>**

ದಿನಾಂಕಃ 27-12-2023 ರಂದು ಮಧ್ಯಾಹ್ನ 02-00 ಗಂಟೆಯ ಸುಮಾರಿಗೆ ಕುಂಚಾವರಂ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಚಾಸಾ-1 ಸರೀತಾ ನೇದ್ದವರ ಮನೆಯ ಹಿಂದಿನ ಜಾಗೆಯ ಕಂಪೌಂಡದಲ್ಲಿ ಆರೋಪಿತರೆಲ್ಲರೂ ಹೊಡೆಯುವ ಏಕೋದ್ದೇಶದಿಂದ ಗುಂಪು ಕಟ್ಟಿಕೊಂಡು ಬಂದ ಕಾರಣ, ಈ ಮೂಲಕ ಭಾ.ದಂ.ಸಂ.ಕಲಂ.143 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

2. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರಾದ ನೀವು ಚಾಸಾ-1 ಸರೀತಾ ನೇದ್ದವರಿಗೆ ಹೊಡೆಯುವ ಏಕೋದ್ದೇಶದಿಂದ ಬಂದು ಸದರಿ ಅಕ್ರಮ ಕೂಟದ ಸದಸ್ಯರಾಗಿದ್ದರಿಂದ ಭಾ.ದಂ.ಸಂ.ಕಲಂ.147 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

3. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಚಾಸಾ-4 ಶಬ್ಬೀರ ಮತ್ತು ಗೋಪಾಲ ಚಾಸಾ-5 ನೇದ್ದವರು ಚಾಸಾ-1 ಸರೀತಾ ನೇದ್ದವರ ಮನೆ ಕಂಪೌಂಡ ಕಟ್ಟುವಾಗ ಆರೋಪಿತರೆಲ್ಲರೂ ಕೈ ಹಿಡಿದು ತಡೆದು ನಿಲ್ಲಿಸಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ. 341 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

4. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರಾದ ನೀವು ಕೈಯಲ್ಲಿ ಕಲ್ಲುಗಳು ಹಾಗೂ ಬಡಿಗೆ ಹಿಡಿದುಕೊಂಡು ಚಾಸಾ-1 ಸರೀತಾ ನೇದ್ದವರಿಗೆ ಹೆದರಿಸಿ ಅಪಾಯವನ್ನುಂಟು ಮಾಡಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 336 ಸಹವಾಚಕ ಕಲಂ 149 ರಡಿಯಲ್ಲಿ

ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

5. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರಾದ ನೀವು ಚಾಸಾ-4 ಮತ್ತು 5 ನೇದ್ದವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 504 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

6. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರು ನೀವು ಚಾಸಾ-1 ಸರೀತಾ ನೇದ್ದವರಿಗೆ ಹೊಡೆದು ಖಲಾಸ ಮಾಡುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ ಅರ್ಥವಾಯಿತು

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?
ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 19.03.2025.
ಸ್ದಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.